CC No.1231/23
CW-1 PW-1

**ಅಪರ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ**

**CC No : 1231/2023**

**ದಿಃ 09.10.2025**

ಸಾಕ್ಷಿಯನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿದಾರರ ಹೆಸರು | : | ಸಿ ಈಶ್ವರಪ್ಪ |
| ತಂದೆಯ ಹೆಸರು | : | ಲೇ. ವೆಂಕಟೇಶಪ್ಪ |
| ವಯಸ್ಸು | : | 62 ವರ್ಷ |
| ಉದ್ಯೋಗ | : | ನಿವೃತ್ತ ಪಿಎಸ್‌ಐ |
| ವಾಸಸ್ಥಳ | : | ಕೋಲಾರ ಟೌನ್ |

ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದ:

ನಾನು 02.02.2023ರಿಂದ 05.06.2023ರವರೆಗೆ ಚನ್ನಪಟ್ಟಣ ಪುರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ05.04.2023ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ನಾನು ಠಾಣಾ ಕತರ್ವ್ಯದಲ್ಲಿದ್ದಾಗ ಪುರ ಪೊಲೀಸ್ ಠಾಣಾ ವ್ಯಾಪ್ತಿಯ ಕುವೆಂಪುನಗರದ 8ನೇ ಅಡ್ಡರಸ್ತೆಯಲ್ಲಿ ಯಾರೋ ಒಬ್ಬ ಆಸಾಮಿ ಬ್ಯಾಗಿನಲ್ಲಿ ಮದ್ಯದ ಪೌಚುಗಳನ್ನು ಯಾವುದೇ ಪರವಾನಗಿ ಇಲ್ಲದೇ ತೆಗೆದುಕೊಂಡು ಹೋಗುತ್ತಿರುವುದಾಗಿ ಬಾತ್ಮಿದಾರರಿಂದ ಬಂದ ಮಾಹಿತಿ ಮೇರೆಗೆ ಆತನ ಮೇಲೆ ದಾಳಿ ಮಾಡಲು ಚಾಸಾ.2 ಮತ್ತು 3ರವರನ್ನು ಬರಮಾಡಿಕೊಂಡು ಅವರಿಗೆ ನೋಟೀಸ್ ಜಾರಿ ಮಾಡಿ ದಾಳಿ ಮಾಡಲು ಅವರಿಗೆ ನಮ್ಮ ಜೊತೆ ಸಹಕರಿಸುವಂತೆ ಕೋರಿ ಅವರು ಒಪ್ಪಿದ ಮೇರೆಗೆ ನಮ್ಮ ಠಾಣಾ ಸಿಬ್ಬಂದಿಗಳಾದ ಚಾಸಾ.4 ಮತ್ತು 5ರವರನ್ನು ಕೆಎ-42 ಜಿ-1145 ಸರ್ಕಾರಿ ಜೀಪಿನಲ್ಲಿ ಚಾಸಾ.6ರವರ ಜೊತೆ ಕುವೆಂಪುನಗರದ 8ನೇ

ಅಡ್ಡರಸ್ತೆಗೆ ಬಂದು ಆಸಾಮಿ ಬಳಿ ಬಂದು ಆತ ಹಿಡಿದಿದ್ದ ಬ್ಯಾಗನ್ನು ಪರಿಶೀಲಿಸಿದಾಗ 180 ಮಿಲಿಯ 24 ಹಯ್‌ವರ್ಡ್ಸ್ ಕಂಪನಿಯ ಮದ್ಯದ ಪೌಚುಗಳು, 650 ಮಿಲಿಯ ಯು.ಬಿ. ಬಿಯರ್‌ನ 10 ಬಾಟಲುಗಳು ಮತ್ತು 180 ಮಿಲಿಯ ಓಲ್ಡ್ ಟಾವರಿನ್ ಕಂಪನಿಯ 8 ಮದ್ಯದ ಪೌಚುಗಳು ದೊರತಿದ್ದು, ನಂತರ ಸದರಿ ಆಸಾಮಿಯ ಬಳಿ ಇದ್ದ ಸದರಿ ಮದ್ಯದ ಪೌಚು ಮತ್ತು ಬಾಟಲುಗಳನ್ನು ಚಾಸಾ.2 ಮತ್ತು 3ರವರ ಸಮಕ್ಷಮ ದಾಳಿ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಮದ್ಯದ ಪೌಚು ಮತ್ತು ಬಾಟಲುಗಳ ಪೈಕಿ ತಲಾ ಒಂದೊಂದು ಪೌಚು ಮತ್ತು ಬಾಟಲುಗಳನ್ನು ಪ್ರತ್ಯೇಕಿಸಿ ಬಿಳಿ ಬಟ್ಟೆಯಿಂದ ಸುತ್ತಿ 'ಎಸ್' ಎಂಬ ಅಕ್ಷರದಿಂದ ಸೀಲ್ ಮಾಡಿರುತ್ತೇನೆ. ಸದರಿ ಮದ್ಯದ ಒಟ್ಟು ಮೊತ್ತ 3,668/- ಎಂದು ನಮೂದಿಸಿಕೊಂಡಿರುತ್ತೇನೆ. ಸದರಿ ಘಟನೆ ನಡೆದ ಸ್ಥಳದಲ್ಲಿ ಚಾಸಾ.2 ಮತ್ತು 3ರವರ ಸಮಕ್ಷಮ ಸ್ಥಳ ಮಹಜರ್ ಕ್ರಮ ಕೈಗೊಂಡು ಆಸಾಮಿಯನ್ನು ಮಾಲುಸಮೇತ ಠಾಣೆಗೆ ಕರೆದುಕೊಂಡು ಹೋಗಿ ಚಾಸಾ.7ರವರ ಸಮಕ್ಷಮ ಹಾಜರುಪಡಿಸಿಕೊಂಡಿರುತ್ತೇನೆ. ನಿವೇದನೆ/ಪಿರ್ಯಾದನ್ನು ನಿ.ಪಿ.1, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ), ಪಂಚನಾಮೆಯನ್ನು ನಿ.ಪಿ.2, ಸಾಕ್ಷಿಯ ಸಹಿಯನ್ನು ನಿ.ಪಿ.2(ಎ), ಚಾಸಾ.2 ಮತ್ತು 3ರವರಿಗೆ ನೀಡಿದ ನೋಟೀಸನ್ನು ನಿ.ಪಿ.3, ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು.

3. ದಿಃ06.04.2023ರಂದು 180 ಮಿಲಿಯ 23 ಹಯ್‌ವರ್ಡ್ಸ್ ಪೌಚುಗಳನ್ನು, ಹಾಗೆಯೇ 180 ಮಿಲಿಯ ಓಲ್ಡ್ ಟವರಿನ್‌ನ ವಿಸ್ಕಿಯ 7 ಪೌಚುಗಳನ್ನು ಮತ್ತು 650 ಮಿಲಿಯ 9 ಯು.ಬಿ. ಬಾಟಲುಗಳನ್ನು

ಅಬಕಾರಿ ಉಪ ಆಯುಕ್ತರು, ರಾಮನಗರರವರಿಗೆ ಸಲ್ಲಿಸಿಕೊಳ್ಳಲು ಮನವಿ ಮಾಡಿಕೊಂಡಿರುತ್ತೇನೆ. ಸದರಿ ಮನವಿ ಪತ್ರವನ್ನು ನಿ.ಪಿ.4, ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು.

4. ದಿಃ18.04.2023ರಂದು ಎಫ್ಎಸ್ಎಲ್ ವರದಿಯನ್ನು ಪಡೆದು ಕೇಸಿನ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಎಫ್ಎಸ್ಎಲ್ ವರದಿಯನ್ನು ನಿ.ಪಿ.5 ಎಂದು ಗುರುತಿಸಲಾಯಿತು. ದಿಃ19.04.2023ರಂದು ಆರೋಪಿತನ ವಿರುದ್ದ ಸಾಕ್ಷ್ಯಾಧಾರಗಳು ಕಂಡುಬಂದಿದ್ದರಿಂದ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿಕೊಂಡಿರುತ್ತೇನೆ. ಆರೋಪಿಯನ್ನು ಮತ್ತು 180 ಮಿಲಿಯ ಒಂದು ಹಯ್‌ವರ್ಡ್ಸ್ ಮದ್ಯದ ಪೌಚು, 180 ಮಿಲಿಯ ಒಂದು ಓಲ್ಡ್ ಟವರಿನ್ ಪೌಚು ಮತ್ತು 650 ಮಿಲಿಯ ಒಂದು ಯು.ಬಿ. ಬಾಟಲನ್ನು ಸಾಕ್ಷಿ ನೋಡಿ ಗುರುತಿಸಲಾಗಿ ಅವುಗಳನ್ನು ಕ್ರಮವಾಗಿ ಮು.ಮಾ.1ರಿಂದ 3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರಃ ಶ್ರೀ. ಎಲ್.ಎ., ವಕೀಲರಿಂದಃ**

ಬಾತ್ಮಿದಾರರಿಂದ ಯಾರೋ ಒಬ್ಬ ವ್ಯಕ್ತಿ ಮದ್ಯದ ಪೌಚುಗಳನ್ನು ಅಕ್ರಮವಾಗಿ ಇಟ್ಟುಕೊಂಡಿದ್ದಾನೆ ಎಂದು ಮಾಹಿತಿ ಬಂದಿರುತ್ತದೆಂದು ಹೇಳಿದ್ದು, ಮಾಹಿತಿ ಬಂದ ನಂತರ ತಾವು ಪ್ರ.ವ.ವ.ಯನ್ನು ದಾಖಲು ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಘಟನೆ ನಡೆಯಿತೆಂದು ಹೇಳಿದ ದಿನ ನಾನೇ ಪುರ ಪೊಲೀಸ್ ಠಾಣೆಯ ಎಸ್ ಹೆಚ್‌ಓ ಆಗಿ ಕರ್ತವ್ಯದಲ್ಲಿದ್ದೆ ಎಂದರೆ ಸರಿ. ಚಾಸಾ.2 ಮತ್ತು 3ರವರನ್ನು ಎಲ್ಲಿಂದ ಕರೆಸಿದ್ದೀರಿ ಎಂದು ಹೇಳಲಾಗಿ ಸಾಕ್ಷಿ ನಮ್ಮ ಠಾಣೆಯ ಎದುರು ಹೋಗುತ್ತಿದ್ದಾಗ ಅವರನ್ನು ದಾಳಿ ಮಾಡಲು ನಮ್ಮ ಜೊತೆ

ಸಹಕರಿಸಬೇಕೆಂದು ಕೇಳಿಕೊಂಡಿರುತ್ತೇನೆ ಎಂದು ಹೇಳುತ್ತಾರೆ. ಚಾಸಾ.2 ಮತ್ತು 3ರವರಿಗೆ ನೀಡಿದೆ ಎಂದು ಹೇಳಿದ ನೋಟೀಸಲ್ಲಿ ಯಾವ ಸ್ಥಳ ಮತ್ತು ಯಾವ ಕೃತ್ಯದ ಸಂಬಂಧ ದಾಳಿ ಮಾಡಲು ಹೋಗುತ್ತಿದ್ದೇನೆ ಎಂದು ನಮೂದಿಸಿಲ್ಲ ಎಂದರೆ ಸರಿ. ಒಂದೇ ನೋಟೀಸಿನಲ್ಲಿ ಚಾಸಾ.2 ಮತ್ತು 3ರವರ ಸಹಿಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಘಟನೆ ನಡೆಯಿತು ಎಂದು ಹೇಳಿದ ಸ್ಥಳಕ್ಕೆ ತಾವು ಹೋಗಲು ಠಾಣೆ ಬಿಟ್ಟಾಗ ಎಷ್ಟು ಗಂಟೆ ಆಗಿತ್ತು ಎಂದರೆ, ಠಾಣೆ ಬೆಳಿಗ್ಗೆ 11.00 ಗಂಟೆಗೆ ಬಿಟ್ಟಿರುತ್ತೇನೆ. ಘಟನೆ ನಡೆಯಿತು ಎಂದು ಹೇಳಿದ ಸ್ಥಳ ಸಾಕಷ್ಟು ವಾಹನ ಮತ್ತು ಜನಸಂದಣಿ ಇರುವ ಜಾಗ ಎಂದರೆ ಸರಿ. ಬೆಳಿಗ್ಗೆ 11.00 ಗಂಟೆಗೆ ಠಾಣೆ ಬಿಟ್ಟು 11.40ಕ್ಕೆ ಘಟನೆ ನಡೆಯಿತು ಎಂದು ಹೇಳುವ ಸ್ಥಳಕ್ಕೆ ಹೋಗಿರುತ್ತೇನೆ ಎಂದು ಹೇಳಿದ ಸಮಯದಲ್ಲಿ ಪಂಚನಾಮೆಯನ್ನು ಠಾಣೆಯಲ್ಲಿಯೇ ಕುಳಿತು ತಯಾರು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ವಶದಲ್ಲಿದ್ದ ಮದ್ಯದ ಪೌಚು ಮತ್ತು ಬಾಟಲಿಯನ್ನು ಎಲ್ಲಿಂದ ತಂದು ಖರೀದಿ ಮಾಡಿರುತ್ತೀರಿ ಎಂದು ವಿಚಾರಿಸಿದಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿತನಿಂದ ವಶಪಡಿಸಿಕೊಂಡೇಂದೇಳಿದ ಬಾಟಲ್ ಮತ್ತು ಪೌಚುಗಳ ಮೇಲೆ ಯಾವ ಸೀರಿಯಲ್ ನಂಬರ್‌ಗಳು ನಮೂದಾಗಿರುತ್ತವೆ ಎಂದು ಮಹಜರ್‌ನಲ್ಲಿ ಬರೆದಿದೆಯಾ ಎಂದರೆ ಸಾಕ್ಷಿ, ಇಲ್ಲ ಎಂದು ನುಡಿಯುತ್ತಾರೆ. ಘಟನೆ ನಡೆಯಿತ ಎಂದು ಹೇಳಿದ ಸ್ಥಳಕ್ಕೆ ನಾನು ಪಂಚರುದಾರರ ಹಾಗೂ ಇನ್ನಿತರ ಸಾಕ್ಷಿದಾರರ ಸಮಕ್ಷಮ ಹೋಗಿಲ್ಲ, ಅಲ್ಲಿ ಆರೋಪಿತನಿಂದ ಯಾವುದೇ ಮದ್ಯದ ಪೌಚು ಮತ್ತು ಬಾಟಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

CC No.1231/23

CW-1 PW-1

2. ನಿ.ಪಿ.4ರಲ್ಲಿ ಆರೋಪಿತನಿಂದ ವಶಪಡಿಸಿಕೊಂಡೇಂದೇಳಿದ ಮದ್ಯದ ಪೌಚುಗಳ ಪೈಕಿ ತಲಾ ಒಂದೊಂದು ಪೌಚು ಮತ್ತು ಬಾಟಲನ್ನು ಎಫ್‌ಎಸ್‌ಎಲ್ ವರದಿಗೆ ಪ್ರತ್ಯೇಕವಾಗಿ ತೆಗೆದುಕೊಂಡು ಇನ್ನುಳಿದ ಪೌಚುಗಳನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ಈ ಬಗ್ಗೆ ದಿಃ06.04.2023ರಂದು ನಿವೇದಿಸಿಕೊಂಡಿರುತ್ತೇನೆ ಎಂದು ಹೇಳಿದ್ದು ನಿ.ಪಿ.4ರಲ್ಲಿ ದಿಃ06.03.2023ರಂದು ಎಂದು ನಮೂದು ಇದೆ ಎಂದರೆ ಸಾಕ್ಷಿ ಕೈ ತಪ್ಪಿನಿಂದ ದಿನಾಂಕ ತಪ್ಪಾಗಿರುತ್ತದೆ ಎಂದು ಹೇಳುತ್ತಾರೆ. ನಿ.ಪಿ.4ರ ಉಲ್ಲೇಖದಂತೆ ದಿಃ05.03.2023ರಂದು ಮಧ್ಯಾಹ್ನ 1.00 ಗಂಟೆಗೆ ಠಾಣಾ ಪಿಎಸ್‌ಐರವರು ಹಾಜರಾಗಿ ನೀಡಿದ ವರದಿ ಎಂದು ನಮೂದಾಗಿದೆ ಎಂದರೆ ಸರಿ. ದಿಃ05.04.2023ರಂದು ಆರೋಪಿ ಯಾವುದೇ ಕೃತ್ಯ ಎಸಗಿಲ್ಲ ಎಂದರೆ ಸರಿಯಲ್ಲ. ನಾನು ಠಾಣಾ ಎಸ್‌ಹಚ್ ಒಇದ್ದು ನಮ್ಮ ಠಾಣೆಯ ಕೇಸಿನ ಅಂಕಿ-ಅಂಶಕ್ಕೋಸ್ಕರ ತೋರಿಸಲು ನಮ್ಮ ಠಾಣೆಯಲ್ಲಿ ವಿಲೇವಾಗಿಯಾಗದೇ ಇರುವ ಸಾರಾಯಿ ಪೌಚು ಮತ್ತು ಬಾಟಲುಗಳನ್ನು ಈ ಕೇಸಿಗೆ ಅಳವಡಿಸಿ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.